KARNATAKA LEGISLATIVE ASSEMBLY RESEARCH AND REFERENCE

ಪತ್ರಿಕಾ ತುಣುಕುಗಳು PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಗಣಿ

ಪತ್ರಿಕೆ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

ದಿನಾಂಕ : DATE : 23/1/2020

ಮೂರು ಸರಕಾರ, ಐವರು ಸಿಎಂಗಳು ಬದಲಾದರೂ ಯಥಾಸ್ಥಿತಿ । ಧೂಳು ತಿನ್ನುತ್ತಿರುವ ಕಡತ

# ಕುಂಟುತ್ತಿದೆ ಅಕ್ರಮ ಗಣಿಗಾರಿಕೆ ತನಿಖೆ

■ ರಾಘವೇಂದ್ರ ಭಟ್ ಬೆಂಗಳೂರು

raghavendra.bhat1@timesgroup.com

ರಾಜ್ಯ ರಾಜಕಾರಣದಲ್ಲಿ ಭಾರಿ ಸದ್ದು ಮಾಡಿದ್ದ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧದ ತನಿಖೆ ಈಗ ಮತ್ತಷ್ಟು ನಿಧಾನಗೊಂಡಿದ್ದು, ಮೂರು ಸರಕಾರ, ಐವರು ಮುಖ್ಯಮಂತ್ರಿಗಳು ಬದಲಾದರೂ ಲೋಕಾಯುಕ್ತ ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದು ಇನ್ನೂ ಸಾಧ್ಯವಾಗಿಲ್ಲ.

ಬೊಕ್ಕಸಕ್ಕೆ ಲಕ್ಷಾಂತರ ಕೋಟಿ ನಷ್ಟವನ್ನುಂಟು ಮಾಡಿದ್ದ ಈ ಪ್ರಕರಣದಲ್ಲಿ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು, ಪ್ರಮುಖ ಕೈಗಾರಿಕಾ ಸಂಸ್ಥೆಗಳು ಭಾಗಿಯಾಗಿರುವ ಬಗ್ಗೆ ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆಯವರು ಸರಕಾರಕ್ಕೆ ಸಲ್ಲಿಸಿದ ಎರಡು ವರದಿಯಲ್ಲಿ ದಾಖಲೆ ಸಮೇತ ಉಲ್ಲೇಖಿಸಲಾಗಿದೆ.

ಅಕ್ರಮ ಗಣಿ ವಿರುದ್ಧ ಹೋರಾಟ ನಡೆಸಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಅವಧಿಯಲ್ಲೇ ತನಿಖೆಯ ಮೇಲೊಂದು ತನಿಖೆಗಾಗಿ ಎಸ್ಐಟಿ, ಲೋಕಾಯುಕ್ತ ತನಿಖೆಗೆ ಆದೇಶಿಸುವ ಮೂಲಕ ಪ್ರಕರಣದ ಬಲ ಉಡುಗಿಸಲಾಗಿತ್ತು. ರಾಜ್ಯದಲ್ಲಿ ಮತ್ತೆ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ತನಿಖೆ ಮತ್ತಷ್ಟು ನಿಧಾನ ಗತಿಗೆ ತಿರುಗಿದೆ. ಗ್ರೂಪ್ ಎ, ಬಿ ಮತ್ತು ಸಿ ಹಂತದ ಗಣಿಗಾರಿಕೆಯ ಜತೆಗೆ ಪಟ್ಟಾ ಭೂಮಿಯಲ್ಲಿನ ಅಕ್ರಮದ ಬಗ್ಗೆ ಲೋಕಾಯುಕ್ತದಲ್ಲಿ ಉಲ್ಲೇಖಿಸಲಾಗಿದೆ.

**ತನಿಖೆಯ ಮೇಲ್ಲೊಂದು ತನಿಖೆ:** ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿ-2ರ 28 ಅಧ್ಯಾಯ ಅತ್ಯಂತ ಮಹತ್ವದ್ದಾಗಿದ್ದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಸೇರಿದಂತೆ ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ನಾನಾ ಇಲಾಖೆಯ 617 ಅಧಿಕಾರಿ/ ನೌಕರರು ಈ ಹಗರಣದಲ್ಲಿ ಭಾಗಿಯಾಗಿರುವ ಬಗ್ಗೆ ಲೋಕಾಯುಕ್ತ ವರದಿಯಲ್ಲಿ ಪಟ್ಟಿ ನೀಡಲಾಗಿತ್ತು. ಕಾನೂನು ಬಾಹಿರವಾಗಿ ಗಣಿಗಾರಿಕೆ ನಡೆಸಿದ 382 ಕಂಪನಿಗಳು ಹಾಗೂ ಟ್ರೇಡರ್ಸ್‌ಗಳಿಂದ ರಿಸ್ಕ್ ಅಮೌಂಟ್ ಪಡೆದು ಅದಿರನ್ನು ಸುರಕ್ಷಿತ ಪ್ರದೇಶಕ್ಕೆ ತಲುಪಿಸಲಾಗುತ್ತಿತ್ತು. ಈ ಅವ್ಯವಹಾರಕ್ಕೆ ಕಾರಣವಾದ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಅನ್ವಯ ಕ್ರಮ ತೆಗೆದುಕೊಳ್ಳುವ ಜತೆಗೆ ಲಂಚದ ಹಣವನ್ನು ವಸೂಲು ಮಾಡಬೇಕೆಂದು ಲೋಕಾಯುಕ್ತರು ಶಿಫಾರಸು ಮಾಡಿದ್ದರು. ಆದರೆ ಈ ಶಿಫಾರಸು ಅನುಷ್ಠಾನ ಮಾಡುವ ಬದಲು ನಾಗರಿಕ ಸೇವಾ ನಿಯಮಾವಳಿ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ಅನ್ವಯ ನವೆಂಬರ್ 11, 2013ರಂದು ತನಿಖೆ ನಡೆಸುವಂತೆ ಮತ್ತೆ ಲೋಕಾಯುಕ್ತಕ್ಕೆ ವಹಿಸಲಾಗಿದೆ. ಇದಾಗಿ ಏಳು ವರ್ಷ ಕಳೆದರೂ ಕ್ರಮ ತೆಗೆದುಕೊಳ್ಳುವುದಕ್ಕೆ ರಾಜ್ಯ ಸರಕಾರ ಧೈರ್ಯ ಪ್ರದರ್ಶಿಸಿಲ್ಲ. ಎಸ್ಐಟಿ, ಗಣಿ ಮತ್ತು ಭೂ ವಿಜ್ಞಾನ ಸೇರಿದಂತೆ ಅನೇಕ ಹಂತದಲ್ಲಿ ಕಡತ ಧೂಳು ತಿನ್ನುತ್ತಿದೆ.




## ಪೆನ್‌ಡ್ರೈವ್‌ನಿಂದ ಹೊರ ಬಿತ್ತು ಹಗರಣದ ಹೂರಣ

ಕಾರದಪುಡಿ ಮಹೇಶ್ ಹಾಗೂ ಸಹಚರರಿಂದ ವಶಪಡಿಸಿಕೊಂಡ ಪೆನ್‌ಡ್ರೈವ್ ಆಧಾರದ ಮೇಲೆ ಹಗರಣದ ವ್ಯಾಪ್ತಿ ಎಷ್ಟೆಂಬುದು ಬಯಲಾಯಿತು. 60 ಬ್ಯಾಂಕ್ ಖಾತೆಗಳ ಮೂಲಕ ಹಾಗೂ ನಗದು ರೂಪದಲ್ಲಿ ಅಧಿಕಾರಿಗಳಿಗೆ ಮಹೇಶ್ ಲಂಚ ನೀಡಿರುವ ಬಗ್ಗೆ ಪೆನ್‌ಡ್ರೈವ್‌ನಲ್ಲಿ ಮಾಹಿತಿ ಇತ್ತು.

## ತನಿಖಾಧಿಕಾರಿಗಳು ಬಹುತೇಕರು ನಿವೃತ್ತಿ/ಮರಣ





ಜೀವದ ಹಂಗು ತೊರೆದು ತನಿಖೆ ನಡೆಸಿದ್ದ ಡಾ.ಯು.ವಿ.ಸಿಂಗ್ ಮತ್ತಿತರ ಅಧಿಕಾರಿಗಳು ನಿವೃತ್ತಿಯಾಗಿದ್ದರೆ, ದಕ್ಷ ಅಧಿಕಾರಿ ಮಧುಕರ ಶೆಟ್ಟಿ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಆರೋಪ ಪಟ್ಟಿಯಲ್ಲಿದ್ದ ಅನೇಕರು ತನಿಖೆ ಮುಕ್ತಾಯಕ್ಕೆ ಮುನ್ನವೇ ಪ್ರಾಣಬಿಟ್ಟಿದ್ದಾರೆ. ಇವರ ಜತೆಯಲ್ಲಿ ಹಗರಣದಲ್ಲಿ ಅಕ್ರಮಗಳನ್ನೇ ನಡೆಸಿದ್ದ ಗಣಿ ಇಲಾಖೆ ನೌಕರ ಬಿ.ಎ.ಚಂದ್ರಶೇಖರ್ 2015ರಲ್ಲೇ ಮೃತಪಟ್ಟಿದ್ದಾರೆ.

**ಯಥಾಸ್ಥಿತಿ**

ಲೋಕಾಯುಕ್ತ ವರದಿ ಆಧರಿಸಿ 2011ರಿಂದಲೂ ಸರಕಾರ ಯಥಾಸ್ಥಿತಿ ಕಾಪಾಡುತ್ತಿದೆ. ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳೇನೆಂಬ ಬಗ್ಗೆ ಜನವರಿ 17, 2020ರಂದು ನಡೆದ ಭರವಸೆಗಳ ಸಮಿತಿ ಸಭೆಗೆ ಸರಕಾರ ಮಾಹಿತಿ ನೀಡಿದೆ. ವರದಿ ಆಧರಿಸಿ ಯಾರ ವಿರುದ್ಧವೂ ಕ್ರಮ ತೆಗೆದುಕೊಂಡಿಲ್ಲ ಎಂಬುದಕ್ಕೆ ಈ ಮಾಹಿತಿ ಕೈಗನ್ನಡಿಯಾಗಿದೆ.

**31,40,000**
ಮೆ.ಟನ್ ಅದಿರು ಕಳ್ಳ ಸಾಗಣೆ

**15,700**
ಹಾಲೋಗ್ರಾಮಗಳು ಮಾಯ

## ವಿಚಾರಣೆ ಹಂತದಲ್ಲೇ ಪ್ರಮುಖ ಆರೋಪಿಯೂ ನಿಧನ

ಪ್ರಕರಣದಲ್ಲಿ ತನಿಖೆಯನ್ನು ಸರಕಾರ ಎಷ್ಟು ವೇಗವಾಗಿ ನಡೆಸುತ್ತಿದೆ ಎಂಬುದಕ್ಕೆ ಇದೊಂದು ಪ್ರಕರಣವೇ ಸಾಕ್ಷಿ. ಈ ಪ್ರಕರಣದಲ್ಲಿ ಬರೋಬ್ಬರಿ 31,40,000 ಮೆಟ್ರಿಕ್ ಟನ್ ಅದಿರು ಕಳ್ಳ ಸಾಗಣೆಗೆ ಕಾರಣರಾದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹೊಸಪೇಟೆ ಉಪನಿರ್ದೇಶಕರ ಕಚೇರಿ ಶೀಘ್ರ ಲಿಪಿಕಾರ ಬಿ.ಎ.ಚಂದ್ರಶೇಖರ್ 2015ರಲ್ಲೇ ಮೃತಪಟ್ಟಿದ್ದಾರೆ. ಇಲಾಖೆಯ ಸುಮಾರು 15,700 ಹಾಲೋಗ್ರಾಮಗಳನ್ನು ಕದ್ದು ಅಕ್ರಮಕ್ಕೆ ಎಡೆ ಮಾಡಿಕೊಟ್ಟ ಈತನ ವಿರುದ್ಧ ಕ್ರಿಮಿನಲ್ ಹಾಗೂ ಇಲಾಖಾ ವಿಚಾರಣೆಗೆ ಲೋಕಾಯುಕ್ತರು ಶಿಫಾರಸು ಮಾಡಿದ್ದರು.



● 2011ರಲ್ಲಿ ನಾನು ಸರಕಾರಕ್ಕೆ ವರದಿ ನೀಡಿದ್ದೆ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವ ಜತೆಗೆ ಗಣಿಗಾರಿಕೆಯಲ್ಲಿ ಮಾಡಬೇಕಾದ ಬದಲಾವಣೆಗಾಗಿ ಸಲಹೆ ನೀಡಿದ್ದೆ. ಸುಪ್ರೀಂಕೋರ್ಟ್ ಆಸಕ್ತಿ ತೋರಿದ್ದರಿಂದ ಕೆಲ ದಿನಗಳ ಕಾಲ ಗಣಿಗಾರಿಕೆ ನಿಂತಿತ್ತು. ಆದರೆ ಅಕ್ರಮವೆಸಗಿದವರಿಗೆ ಯಾವುದೇ ಶಿಕ್ಷೆಯಾಗಿಲ್ಲ. ಪರಿಸರ, ದೇಶಕ್ಕೆ ನಷ್ಟವಾದರೆ ನಮಗೇನು ? ಎಂಬ ಧೋರಣೆ ಎಲ್ಲರಲ್ಲೂ ಕಾಣುತ್ತಿದೆ. ಮನಸಿದ್ದರೆ ಮಾರ್ಗ ಹುಡುಕಬಹುದು. ಮನಸ್ಸೇ ಇಲ್ಲವಾದರೆ...

-ನ್ಯಾ. ಸಂತೋಷ್ ಹೆಗ್ಡೆ ನಿವೃತ್ತ ಲೋಕಾಯುಕ್ತ